

ಕಳೆದುಕೊಳ್ಳತೊಡಗುತ್ತಿತ್ತು. ಮಳೆಯ ಮೋಡಗಳು ಅಲ್ಲಿ ತೋರಿ ಇಲ್ಲಿ ಮಾಯವಾಗುತ್ತಿದ್ದವು. ಆ ದಿನಗಳಲ್ಲಿ ಊರಿನವರೆಲ್ಲಾ ನಮ್ಮೂರಿನ ರಂಗನಾಥ ಸ್ವಾಮಿಯ ಗುಡಿಯ ಬಳಿ ಸೇರಿ 'ಹೊರಬೀಡು' ಆಚರಿಸಲು ಎಲ್ಲಾ ಕೋಮಿನವರ ಒಪ್ಪಿಗೆ ಪಡೆದು, ದಿನ ನಿಗದಿ ಮಾಡುತ್ತಿದ್ದರು. ನೀರಗಂಟಿ ಎಲ್ಲಪ್ಪ 'ಹೊರಬೀಡು'ಗೆ ಹೋಗುವ ದಿನವನ್ನು ಊರಿಗೆಲ್ಲಾ ಸಾರುತ್ತಿದ್ದ. ಆ ದಿನಕ್ಕಾಗಿ ನಾವೆಲ್ಲಾ ತುದಿಗಾಲಿನಲ್ಲಿ ನಿಂತು ಕಾಯುತ್ತಿದ್ದೆವು.

'ಹೊರಬೀಡು'ಗೆ ಹೋಗುವ ದಿನ ಮುಂಜಾನೆ ಊರಿನ ಎಲ್ಲರ ಮನೆಯವರೂ ಅಡುಗೆ ಮಾಡಲು ಬೇಕಾದ ಪಾತ್ರೆ–ಪಡಗ, ದಿನಸಿ, ಕುಡಿಯಲು ಹರಿವೆಯಲ್ಲಿ ನೀರನ್ನೂ ಹೊತ್ತು ತರುತ್ತಿದ್ದರು. ಜೊತೆಗೆ ಮನೆಯಲ್ಲಿರುವ ದನ–ಕರ, ಕುರಿ–ಮೇಕೆ–ಕೋಳಿ ಎಲ್ಲವನ್ನೂ ಎಳೆದುಕೊಂಡು ತಮ್ಮ ತಮ್ಮ ಹೊಲಗಳಿಗೆ ಬರುತ್ತಿದ್ದರು. ಬರುವಾಗ್ಗೆ, ಮನೆಗಳಿಗೆ ಬೀಗ ಜಡಿದು, ಉತ್ರಾಸಕ್ಕೆ (ತಲೆಬಾಗಿಲಿಗೆ) ಕಳ್ಳೆ (ಮುಳ್ಳು) ಎಳೆದು ಬರುತ್ತಿದ್ದರು. ಒಂದು ಕೋಳಿಪಿಳ್ಳೆಯಿಂದ ಮೊದಲುಗೊಂಡು ಬಾಣಂತಿಯವರನ್ನೂ ಬಿಡದೆ ಒಂದು ನರಪಿಳ್ಳೆವರೆಗೂ ಊರೊಳಗೆ ಇರದಂತೆ ಎಲ್ಲರೂ ತಮ್ಮ ತಮ್ಮ ಮನೆಗಳಿಂದ ಹೊರಬಂದ ಮೇಲೆ, ಯಾವುದೇ ದುಷ್ಟ ಶಕ್ತಿಗಳು ಊರು ಪ್ರವೇಶಿಸದೇ ಇರಲಿ ಎನ್ನುವ ನಂಬಿಕೆಯಿಂದ, ಊರಿಗೆ ಪ್ರವೇಶಿಸುವ ಎಲ್ಲ ದಾರಿಗಳಿಗೂ ಕಳ್ಳೆ ಎಳೆಯಲಾಗುತ್ತಿತ್ತು. ಎಲ್ಲರೂ